1	2	3		4
2.ಮೈಸೂರು		ಮೈಸೂರು		280
		ಮಂಡ್ಯ		150
		ಚಾಮರಾಜನಗರ		22
		ಕೊಡಗು		42
		ಚಿಕ್ಕಮಗಳೂರು		49
		ದಕ್ಷಿಣ ಕನ್ನಡ		53
		ಹಾಸನ		86
		ಉಡುಪಿ		16
			ಒಟ್ಟು	698
3.	ಬೆಳಗಾಂ	ಬೆಳಗಾಂ		40
	(ಕಂದಾಯ ಇಲಾಖೆ	ವಿಜಾಪುರ		54
	ಮಾತ್ರ)	ಬಾಗಲಕೋಟೆ		73
		ಧಾರವಾಡ		8
		ಗದಗ		52
		ಹಾವೇರಿ		62
		ಕಾರವಾರ		22
			ಒಟ್ಟು	311
4.	ಗುಲ್ಬರ್ಗ	ಬೀದರ್		103
		ಬಳ್ಳಾರಿ		129
		ರಾಯಚೂರು		109
		ಕೊಪ್ಪಳ		58
		ಗುಲ್ಬರ್ಗಾ		219
			ಒಟ್ಟು	618

ರಾಜ್ಯದಲ್ಲಿ ವಿಮಾನ ನಿಲ್ದಾಣಗಳ ನಿರ್ಮಾಣ

1773 (2574) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. :

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮೂಲಭೂತ ಸೌಕರ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಇಲಾಖೆಯ ಮುಂದಿನ ಕಾರ್ಯ ಯೋಜನೆಗಳು ಯಾವುವು; ವಿವರಗಳನ್ನು ನೀಡುವುದು;

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ವಿಮಾನ ನಿಲ್ದಾಣಗಳನ್ನು ಮುಂದಿನ ಸಾಲಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ; ಸ್ಥಳಗಳನ್ನು ಗುರುತಿಸಲಾಗಿದೆಯೇ; ಇದ್ದರೆ ವಿವರ ನೀಡುವುದು;

(ಇ) ಈ ಖಾತೆಗೆ ಆಯವ್ಯಯದಲ್ಲಿ ಒಟ್ಟು ಎಷ್ಟು ಹಣ ಮೀಸಲಿಡಲಾಗಿದೆ; ಇದುವರೆಗೂ ಈ ಇಲಾಖೆಯಿಂದ ವೆಚ್ಚ ಮಾಡಿರುವ ಹಣವೆಷ್ಟು; ವಿವರಗಳನ್ನು ನೀಡಿ.?

ಶೀ ಆರ್.ವಿ. ದೇಶ್‌ಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು)

(ಅ) ತದರಿ ಸಮುದ್ರ ಬಂದರನ್ನು ಬೂಸ್ಟ್ ಆಧಾರದ ಮೇಲೆ ಖಾಸಗಿ ಕ್ಷೇತ್ರದ ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸುವುದು.

(ಆ) ಹಾಲಿ ಇರುವ ಮೈಸೂರು, ಗುಲ್ಬರ್ಗಾ, ಹುಬ್ಬಳ್ಳಿ ಮತ್ತು ಬಳ್ಳಾರಿ ಈ ಸಣ್ಣ ವಿಮಾನ ನಿಲ್ದಾಣಗಳನ್ನು ಖಾಸಗಿ ಬಂಡವಾಳ ಹೂಡಿಕೆದಾರರೊಂದಿಗೆ ಮೇಲ್ದರ್ಜೆಗೇರಿಸುವುದು.

(ಇ) ರಸ್ತೆ ಮೇಲು ಸೇತುವೆ: ಕೆಳ ಸೇತುವೆಗಳನ್ನು ಕಟ್ಟಲು ರಾಜ್ಯ ಸರ್ಕಾರದ ಇಲಾಖೆಗಳು ಹಾಗೂ ರೈಲ್ವೆ ಮಂತ್ರಾಲಯದ ಮಧ್ಯೆ ಸಮನ್ವಯ ಮಾಡುವುದು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಿತರಿಸಿರುವ ಹಸಿರು ಕಾರ್ಡುಗಳ ಬಗ್ಗೆ

1774 (2179) ಶ್ರೀ ಅಂಜನ ಮೂರ್ತಿ (ನೆಲಮಂಗಲ):

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬಡವರಿಗಾಗಿ ವಿತರಿಸಿರುವ ಹಸಿರು ಕಾರ್ಡುಗಳ ಸಂಖ್ಯೆ ಎಷ್ಟು;

(ಆ) ನೆಲಮಂಗಲ ಮತಕ್ಷೇತ್ರಕ್ಕೆ ಎಷ್ಟು ವಿತರಿಸಲಾಗಿದೆ;

(ಇ) ಈ ಹಸಿರು ಕಾರ್ಡಿನ ವಿತರಣೆಯಲ್ಲಿ ಲೋಪದೋಷ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಈ) ಅದರ ಬಗ್ಗೆ ಸರ್ಕಾರದ ಏನು ಕ್ರಮ ಕೈಗೊಂಡಿದೆ;

(ಉ) ಮಿಕ್ಕ ಬಡವರ ಸಂಖ್ಯೆ ಎಷ್ಟೆಂದು ಗುರುತಿಸಲಾಗಿದೆ; ಮಿಕ್ಕ ಇತರರಿಗೆ ಯಾವಾಗ ಹಸಿರು ಕಾರ್ಡು ವಿತರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶೀ ಡಿ.ಬಿ. ಇನಾಂದಾರ್. (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)

(ಅ) ದಿನಾಂಕ: 31-3-2000 ಅಂತ್ಯಕ್ಕೆ 3,59,356 ಹಸಿರು ಪಡಿತರ ಚೀಟಿಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಿತರಿಸಲಾಗಿದೆ.